ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
BE BOUNDLESS
Office of the Registrar Evaluation, Jnana Jyothi Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ: ಬೆಂ.ನ.ವಿ./ಪ.ವಿ./2024-25/1577 ದಿನಾಂಕ: 12.09.2024

## ಅಧಿಸೂಚನೆ

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಇನ್ನಿತರೆ ಪದವಿಗಳ ಪರೀಕ್ಷಾ ಶುಲ್ಕದ ಅಧಿಸೂಚನೆಯಲ್ಲಿ ತಿಳಿಸಿರುವ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಲು ತಪ್ಪಿದರೆ ದಂಡ ಶುಲ್ಕದ ಜೊತೆ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** 1. ಸಿಂಡಿಕೇಟ್ ನಿರ್ಣಯ ದಿನಾಂಕ: 29.07.2024.
2. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 09.09.2024.

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಇನ್ನಿತರೆ ಪದವಿಗಳ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ನಿಗಧಿತ ಶುಲ್ಕ ಹಾಗೂ 1ನೇ ಹಾಗೂ 2ನೇ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕಗಳನ್ನು ನಿಗಧಿತ ದಿನಾಂಕಗಳೊಳಗೆ ಪಾವತಿಸಲು ಸೂಚಿಸಿ ಅಧಿಸೂಚನೆಯನ್ನು ಪ್ರಕಟಿಸಲಾಗುತ್ತಿದೆ. ಆದರೆ ಹೆಚ್ಚಿನ ಪ್ರಮಾಣದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಪಾವತಿಸಲು ನಿಗಧಿತ ದಿನಾಂಕ ಮುಗಿದಿದ್ದರೂ ಕೂಡಾ ಹಾಗೂ ಪರೀಕ್ಷೆ ನಡೆಯುವ ಹಿಂದಿನ ದಿನ ಮತ್ತು ಒಂದೆರಡು ಪರೀಕ್ಷೆ ಮುಗಿದಿದ್ದರು ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಗೆ, ಪರೀಕ್ಷಾ ಶುಲ್ಕ ಪಾವತಿಸಲು ಮನವಿ ಮಾಡಲು ಬೇಟಿ ನೀಡುತ್ತಿರುತ್ತಾರೆ, ಇಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಪೂರ್ವ ಪ್ರಕ್ರಿಯೆಗಳನ್ನು ಪರೀಕ್ಷೆ ಪ್ರಾರಂಬವಾಗುವ ಮೊದಲೇ ಮುಗಿಸಿಕೊಳ್ಳಲು ವಿಶ್ವವಿದ್ಯಾಲಯಕ್ಕೆ ಹಾಗೂ ಕಾಲೇಜುಗಳಿಗೆ ಬಹಳ ತೊಂದರೆಯಾಗುತ್ತಿದ್ದು ಹಾಗೂ ಪರೀಕ್ಷೆಯಾದ ನಂತರವೂ ಕೂಡ ಪರೀಕ್ಷೆ ಫಲಿತಾಂಶಗಳನ್ನು ಪ್ರಕಟಿಸುವ ಸಮಯದಲ್ಲೂ ಸಮಸ್ಯೆಗಳು ಎದುರಾಗುತ್ತಿವೆ. ವಿದ್ಯಾರ್ಥಿಗಳ ತಂದೆ ತಾಯಿಗಳು ಸಹ ಒಂದು ವರ್ಷ ವ್ಯರ್ಥವಾಗುವುದರಿಂದ, ಶುಲ್ಕ ಪಾವತಿಸಲು ಅನುಮತಿ ನೀಡುವಂತೆ ಒತ್ತಾಯ ಮಾಡುತ್ತಿದ್ದಾರೆ. ಇದರಿಂದ ಪರೀಕ್ಷಾ ವಿಭಾಗದಲ್ಲಿ ಅನೇಕ ತೊಂದರೆ ಎದುರಾಗುತ್ತಿವೆ. ಅವುಗಳಲ್ಲಿ ವಿಳಂಭವಾಗಿ ಪರೀಕ್ಷಾ ಶುಲ್ಕ ಪಾವತಿಸಿದರೆ, ಪ್ರಶ್ನೆ ಪತ್ರಿಕೆ ಹಂಚಿಕೆ, ರೂಂ ಅಲಾಟ್‌ಮೆಂಟ್, ಹಾಲ್ ಟಿಕೇಟ್ ಸಿದ್ದಪಡಿಸುವುದು ಕಷ್ಟವಾಗುತ್ತಿದೆ, ಜೊತೆಗೆ ಪರೀಕ್ಷೆಯ ನಂತರವೂ ಸಹ ತೊಂದರೆಯಾಗುತ್ತಿದೆ. ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆ ಪ್ರಾರಂಭವಾಗುವ ಮೂರು ದಿನಗಳ ಮೊದಲಿನವರೆಗೂ ಶುಲ್ಕ ಪಡೆಯಲು ಅನುಕೂಲವಾಗುವಂತೆ ಮತ್ತು ವಿಳಂಭ ಧೋರಣೆ ಅನುಸರಿಸುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಮಾಡುವ ಮತ್ತು ಶುಲ್ಕ ಪಾವತಿಸುವ ವಿಷಯದಲ್ಲಿ ಶಿಸ್ತು ಮೂಡಿಸಲು ಪ್ರಯತ್ನಿಸುವ ಉದ್ದೇಶದಿಂದ ಈ ಕೆಳಗಿನಂತೆ ವಿಶ್ವವಿದ್ಯಾಲಯ ಸಿಂಡಿಕೇಟ್ ನಿರ್ಣಯ ತೆಗೆದುಕೊಂಡಿರುತ್ತದೆ.

ಮೇಲೆ ಹೇಳಿರುವ ಕಾರಣಗಳಿಂದ ವಿಳಂಭವಾಗಿ ಪರೀಕ್ಷಾ ಶುಲ್ಕ ಪಾವತಿಸುವಂತಹ ವಿದ್ಯಾರ್ಥಿಗಳಿಗೆ ವಿಶೇಷ ದಂಡ ಶುಲ್ಕವೆಂದು ಪರೀಕ್ಷಾ ಶುಲ್ಕದ ಅಧಿಸೂಚನೆಯಲ್ಲಿ ಸೂಚಿಸಿ ಪರೀಕ್ಷಾ ಶುಲ್ಕ + 1ನೇ ದಂಡ ಶುಲ್ಕ ರೂ. 200/- ಹಾಗೂ 2ನೇ ದಂಡ ರೂ. 1,000/- ಶುಲ್ಕದೊಂದಿಗೆ ರೂ. 2,000/-

ಗಳನ್ನು (ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕವೆಂದು ಅಧಿಸೂಚನೆಯಲ್ಲಿ ಸೂಚಿಸಿ ವಿದ್ಯಾರ್ಥಿಗಳಿಂದ ಪಾವತಿಸಿಕೊಳ್ಳಲು ಅನುಮತಿಸಲಾಗಿದೆ. ಪರೀಕ್ಷೆಗಳು ಪ್ರಾರಂಭವಾಗುವ ಮೂರು ದಿನಗಳವರೆಗೆ ಮಾತ್ರ ಈ ಅನುಮತಿ ನೀಡಲಾಗಿದ್ದು, ನಂತರ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಈ ವಿಷಯವನ್ನು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಗಮನಕ್ಕೆ ತರಲು ಕೋರಲಾಗಿದೆ ಮತ್ತು ನಿಗದಿತ ಸಮಯದ ನಂತರ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಬಾರದೆಂದು ತಿಳಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)
ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು - 560 001

ಪ್ರತಿ:

- ಮಾನ್ಯ ಕುಲಪತಿಗಳು/ ಕುಲಸಚಿವರು (ಆಡಳಿತ)/ ವಿತ್ತಾಧಿಕಾರಿಗಳ ಆಪ್ತಕಾರ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು – 01.
- ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು–01.
- ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ.